## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ

**Crl. Misc No : 54/2022**

PW: 1

| | | |
|---|---|---|
| ಹೆಸರು | : | ಮಹಾನಂದ |
| ಗಂಡನ ಹೆಸರು | : | ಪಂಪಯ್ಯ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಮನೆ ಕೆಲಸ |
| ಸ್ಥಳ | : | ತರನಳ್ಳಿ |

(ದಿನಾಂಕ: **18-03-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

ಮುಖ್ಯ ವಿಚಾರಣೆ: ಶ್ರೀಮತಿ ಬಿ. ಎಂ. ಪಿ. ಅರ್ಜಿದಾರ ಪರ ವಕೀಲರಿಂದ:

ನನ್ನ ಮದುವೆ 35 ವರ್ಷಗಳ ಹಿಂದೆ ಎದುರುಗಾರನೊಂದಿಗೆ ಆಗಿರುತ್ತದೆ. ಮದುವೆಯು ನನ್ನ ತವರು ಮನೆ ತರನಳ್ಳಿಯಲ್ಲಿ ಆಗಿರುತ್ತದೆ. ಮದುವೆಯಲ್ಲಿ 5 ತೊಲೆ ಬಂಗಾರವನ್ನು ಕೊಟ್ಟು ಸಂಪ್ರಾದಾಯದ ಪ್ರಕಾರ ಮದುವೆಯಾಗಿರುತ್ತದೆ. 2 ವರ್ಷಗಳು ರಾಜಾಪೂರದಲ್ಲಿ ವಾಸವಾಗಿದ್ದು ನಂತರ ನಮ್ಮ ಮನೆಯವರ ವರ್ಗಾವಣೆಯಾದ ನಂತರ ಶಹಾಬಾದಕ್ಕೆ ಬಂದು ಜೀವನ ನಡೆಸಿರುತ್ತೇವೆ. ಆಗ ಗಂಡ ಮತ್ತು ಹೆಂಡತಿ ಚನ್ನಾಗಿ ಇದ್ದೇವು. ಶಹಾಬಾದನಲ್ಲಿ 2 ಮಕ್ಕಳು ಹುಟ್ಟಿರುತ್ತವೆ. 2 ಮಕ್ಕಳಾದ ನಂತರ 8 ವರ್ಷಗಳ ನಂತರ ನನ್ನ ತಂಗಿಯನ್ನು ಮದುವೆ ಮಾಡಿಕೊಂಡಿರುತ್ತಾರೆ. ಅದಕ್ಕೆ ನಮ್ಮ ಯಾವುದೇ ಪರವಾನಗಿ ಇದ್ದಿರುವುದಿಲ್ಲ. ನನ್ನ ತಂಗಿಗೆ ಎರಡು ಹೆಣ್ಣು ಮತ್ತು ಒಂದು ಗಂಡು ಮಗು ಹುಟ್ಟಿರುತ್ತದೆ. ನಂತರ ಎದುರುದಾರನು ನನಗೆ ಹೊಡಿಬಡಿ ಮಾಡುವುದು, ಕಿರುಕುಳ ಕೊಡುವುದು ಮಾಡುತ್ತಿದ್ದನು. ನನ್ನ ಮೊದಲನೆಯ ಮಗಳ ಮದುವೆಯನ್ನು ನನ್ನ ತಂದೆ ತಾಯಿ ಮಾಡಿಕೊಟ್ಟಿರುತ್ತಾರೆ. ಎರಡನೆಯ ಮಗಳ ಮದುವೆಯನ್ನು ಎದುರುದಾರನು ಮಾಡಿಕೊಟ್ಟಿರುತ್ತಾನೆ. ನಂತರ ಎದುರುದಾರನು ನನಗೆ ಸುಮ್ಮನೆ ಕಿರಿಕಿರಿ ಮಾಡಿ ಮನೆಯಿಂದ ಹೋಗುವಂತೆ ಹೇಳಿರುತ್ತಾನೆ. ನಂತರ ನಾನು ನನ್ನ ತವರು ಮನೆಗೆ ಹೋಗಿರುತ್ತೇನೆ.

ಎದುರುದಾರನು ಬಿ.ಎಸ್.ಎನ್.ಎಲ್. ನಲ್ಲಿ ನೌಕರಿ ಮಾಡುತ್ತಿದ್ದರು. ಅವರು ಈಗಾಗಲೇ ನಿವೃತ್ತಿಯಾಗಿದ್ದು ಆ ಕಾಲಕ್ಕೆ ನಲವತ್ತು ಲಕ್ಷ ರೂಪಾಯಿ ಮೇಲ್ಪಟ್ಟು ಹಣ ಬಂದಿರುತ್ತದೆ. ಎದುರುದಾರನು ಸ್ವಂತ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ಸದರಿ ಮನೆಯನ್ನು ಎದುರುದಾರನು ತನ್ನ ಎರಡನೇ ಹೆಂಡತಿ ಹೆಸರಿಗೆ ಮಾಡಿರುತ್ತಾರೆ. ನನ್ನ ತಂದೆ ತಾಯಿಯ ಸಮಕ್ಷಮ ಪಂಚಾಯತಿ ಮಾಡಿದರೂ ಸಹ ಅವರು ನಮ್ಮ ಮಾತನ್ನು ಕೇಳಿರುವುದಿಲ್ಲ. ಎದುರುದಾರನಿಗೆ ಮೂವತ್ತು ಸಾವಿರ ರೂಪಾಯಿ ಮೇಲ್ಪಟ್ಟು ಪಿಂಚಣಿ ಬರುತ್ತದೆ. ಆದ್ದರಿಂದ ನನಗೆ ಪ್ರತಿ ತಿಂಗಳು ಇಪ್ಪತ್ತು ಸಾವಿರ ರೂಪಾಯಿ ಜೀವನಾಂಶ ಕೋರಿ ಆದೇಶ ಮಾಡಬೇಕಾಗಿ

**Crl. Misc No : 54/2022**
PW: 1

ಕೋರಿಕೊಳ್ಳುತ್ತೇನೆ. ನನಗೆ ಈಗಾಗಲೇ ವಯಸ್ಸು ಆಗಿದ್ದು ಖಾಯಿಲೆಗಳು ಇದ್ದು ಆಸ್ಪತ್ರೆ ಖರ್ಚು ಹಾಗೂ ಜೀವನೋಪಾಯಕ್ಕಾಗಿ ಜೀವನಾಂಶವನ್ನು ಎದುರುದಾರನಿಂದ ನೀಡುವಂತೆ ಕೋರಿಕೊಳ್ಳುತ್ತೇನೆ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ.

**Sd/-**
ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ.
ನ್ಯಾಯಾಧೀಶರು, ಶಹಬಾದ.